RNU AIR DHARWAD

# MAY 20, 2024

## ALL INDIA RADIO - DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- ಭಾರತದ ಬಗೆಗಿನ ಓದು ಮತ್ತು ಸಂವಿಧಾನದ ಓದು; ಒಂದೇ ನಾಣ್ಯದ ಎರಡು ಮುಖ – ನ್ಯಾಯಮೂರ್ತಿ ನಾಗಮೋಹನ್ ದಾಸ್.
- ದಾವಣಗೆರೆ ಜಿಲ್ಲಾದ್ಯಂತ ಉತ್ತಮ ಮಳೆ; ಚುರುಕುಗೊಂಡ ಕೃಷಿ ಚಟುವಟಿಕೆ.
- ಮುಂಗಾರು ಮಳೆ; ಕೊಡಗಿನಲ್ಲಿ ಸಂಭವನೀಯ ಪ್ರವಾಹ ಎದುರಿಸಲು, ಪೂರ್ವ ಸಿದ್ಧತೆ.
- ಚಿಕ್ಕಮಗಳೂರು, ಶಿವಮೊಗ್ಗ ಸೇರಿದಂತೆ, ಕರಾವಳಿ ಜಿಲ್ಲೆಗಳಲ್ಲಿ, ಮುಂದಿನ ನಾಲ್ಕೈದು ದಿನ, ಭಾರೀ ಮಳೆ ಸಾಧ್ಯತೆ.

<><><>

**ಈಗ ವಾರ್ತೆಗಳ ವಿವರ**

<><><>

ಭಾರತದ ಬಗೆಗಿನ ಓದು ಮತ್ತು ಸಂವಿಧಾನದ ಓದು, ಎರಡೂ ಒಂದೇ ನಾಣ್ಯದ ಎರಡು ಮುಖಗಳಾಗಿವೆ ಎಂದು ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅಭಿಪ್ರಾಯಪಟ್ಟರು. ಕೋಲಾರದ ನಚಿಕೇತ ನಿಲಯದ, ಬೌದ್ಧ ವಿಹಾರ ತಾಣದಲ್ಲಿ, "ಸಂವಿಧಾನ ಓದು; ಅಂಬೇಡ್ಕರ್ ಕಂಡ ಕನಸುಗಳು ಮತ್ತು ಸಂವಿಧಾನ" ಸಂವಾದ ಕಾರ್ಯಕ್ರಮದಲ್ಲಿ ಅವರು, ಮಾತನಾಡಿದರು. ಡಾಕ್ಟರ್ ಅಂಬೇಡ್ಕರ್ ಅವರ ಸದಾಶಯಗಳು ಸಂವಿಧಾನದಲ್ಲಿ ಅಡಕವಾಗಿವೆ. ಸರ್ವಸ್ಪರ್ಷಿ ಮತ್ತು ಸಮದೃಷ್ಟಿಯ ಚಿಂತನೆ ಕಳೆಗಟ್ಟಿದೆ. ಶಿಕ್ಷಣವಂತರಾದರೂ ಸಹ ಕಾನೂನು ಸಾಕ್ಷರರಾಗಬೇಕು. ಸಂವಿಧಾನವನ್ನು ಪ್ರತಿಯೊಬ್ಬರೂ ಅಧ್ಯಯನ ಮಾಡಬೇಕು ಎಂದರು.

<><><>

ದಾವಣಗೆರೆ ಜಿಲ್ಲಾದ್ಯಂತ ಉತ್ತಮ ಮಳೆಯಾಗಿದೆ. ಕೃಷಿ ಚಟುವಟಿಕೆಗಳು ಚುರುಕುಗೊಂಡಿವೆ. ಮುಂಗಾರು ಹಂಗಾಮಿನ ಬಿತ್ತನೆ ಗುರಿ ಪ್ರಕಾರ, ಕೃಷಿ ಇಲಾಖೆ ಪೂರ್ವ ಸಿದ್ಧತೆ ಮಾಡಿಕೊಂಡಿದೆ. ರೈತರಿಗೆ ಸಕಾಲಿಕವಾಗಿ ವಿತರಿಸಲು, ಅಗತ್ಯ

ಪ್ರಮಾಣದ ಬಿತ್ತನೆ ಬೀಜ ಮತ್ತು ರಸ ಗೊಬ್ಬರ ದಾಸ್ತಾನು ಮಾಡಿಕೊಳ್ಳಲಾಗಿದೆ ಎಂದು, ಕೃಷಿ ಇಲಾಖೆ ಜಂಟಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ಆಕಾಶವಾಣಿಗೆ ತಿಳಿಸಿದ್ದಾರೆ. 2 ಲಕ್ಷ 50 ಸಾವಿರ ಹೆಕ್ಟೇರ್ ಕೃಷಿ ಯೋಗ್ಯ ಭೂಮಿಯಲ್ಲಿ, ಈ ಬಾರಿ 1 ಲಕ್ಷದ 30 ಸಾವಿರ ಹೆಕ್ಟೇರ್‌ನಲ್ಲಿ ಮೆಕ್ಕೆ ಜೋಳ, 17 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ, ದ್ವಿದಳ ಧಾನ್ಯ ಬಿತ್ತನೆಯ ಗುರಿ ಹೊಂದಲಾಗಿದೆ ಎಂದು ಅವರು, ಹೇಳಿದರು.

<><><>

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ, ಕೃಷಿ ಇಲಾಖೆ, ಶೇಕಡ 97 ದಶಾಂಶ 3-1 ರಷ್ಟು ಬೇಸಿಗೆ ಬೆಳೆ ಸಮೀಕ್ಷೆಯನ್ನು ಪೂರ್ಣಗೊಳಿಸಿದೆ.

<><><>

2023-24 ನೇ ಸಾಲಿನ ಬರಗಾಲದ ಹಿನ್ನೆಲೆ, ಒಟ್ಟು 10 ಹಂತಗಳಲ್ಲಿ, 55 ಕೋಟಿ ರೂಪಾಯಿ ಬರ ಪರಿಹಾರದ ಹಣವನ್ನು, ಚಿಕ್ಕಬಳ್ಳಾಪುರ ಜಿಲ್ಲೆಯ 97 ಸಾವಿರಕ್ಕೂ ಅಧಿಕ ರೈತರ ಖಾತೆಗಳಿಗೆ, ನೇರವಾಗಿ ನಗದು ವರ್ಗಾವಣೆ ಮಾಡಲಾಗಿದೆ ಎಂದು, ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ಧ್ವನಿ 30 ಸೆಕೆಂದುಗಳು

<><><>

ಮುಂಗಾರು ಮಳೆ, ಕೊಡಗಿನಲ್ಲಿ ಧಾರಾಕಾರ ಸುರಿಯುವುದರಿಂದ, ಉಂಟಾಗಬಹುದಾದ ಸಂಭವನೀಯ ಅಪಾಯ ಎದುರಿಸಲು, ಜಿಲ್ಲಾಡಳಿತ ಪೂರ್ವ ಸಿದ್ಧತೆ ಕೈಗೊಳ್ಳುವಂತೆ, ಎಲ್ಲ ಇಲಾಖೆಗಳಿಗೆ ಸೂಚಿಸಿದೆ. ಅಗ್ನಿ ಶಾಮಕ ದಳ ಮತ್ತು ತುರ್ತು ಸೇವೆಗಳ ಇಲಾಖೆ, ಕೂಟುಹೊಳೆ ಹಿನ್ನೀರಿನಲ್ಲಿ, ಪ್ರವಾಹದ ಸಂಭಾವ್ಯ ಅಪಾಯಗಳನ್ನು ಎದುರಿಸಲು, ತರಬೇತಿ ಹಾಗೂ ಅಣಕು ಕಾರ್ಯಾಚರಣೆ ನಡೆಸಿತು. ಜಿಲ್ಲಾ ಅಗ್ನಿ ಶಾಮಕ ಅಧಿಕಾರಿ ಪಿ.ಕೆ. ಶೋಭಿತ್, ಕೊಡಗು ಜಿಲ್ಲೆಯಲ್ಲಿ ಪ್ರವಾಹ ಸಾಧ್ಯತೆಗಳಿರುವ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲಿಸಿದ್ದಾರೆ.

<><><>

ರಾಜ್ಯದ ಹಲವು ಜಿಲ್ಲೆಗಳಲ್ಲಿ, ಮುಂದಿನ ನಾಲ್ಕೈದು ದಿನ ಭಾರೀ ಮಳೆಯಾಗಲಿದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ವಾಯುಭಾರ ಕುಸಿತದ ಕಾರಣ, ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ಕರಾವಳಿ ಭಾಗದ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದೆ.

<><><>

ವಾಯು ಭಾರ ಕುಸಿತ ಹಿನ್ನೆಲೆ, ಬುಧವಾರ ದಿನಾಂಕ 22ರ ವರೆಗೆ, ಸಮುದ್ರಕ್ಕೆ ಇಳಿಯದಂತೆ, ಉತ್ತರಕನ್ನಡ ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ, ಮೀನುಗಾರರಿಗೆ ಸೂಚಿಸಿದ್ದಾರೆ. ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆಯಂತೆ, ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತವಾಗುವ ಸಾಧ್ಯತೆಯ ಹಿನ್ನೆಲೆ, ರಾಜ್ಯದ ಕರಾವಳಿ ಗುಂಟ, 40 ಕಿಲೋ ಮೀಟರ್ ನಿಂದ 55 ಕಿಲೋ ಮೀಟರ್ ವೇಗದಲ್ಲಿ ಬಿರು ಗಾಳಿ ಬೀಸಲಿದೆ. ಸಮುದ್ರದಲ್ಲಿ ಹೆದ್ದೆರೆಗಳು ಏಳುವ ಸಂಭವವಿದ್ದು, ಮೀನುಗಾರಿಕೆಗೆ ತೆರಳಿರುವ ಎಲ್ಲಾ ದೋಣಿಗಳನ್ನು, ಕೂಡಲೇ ದಡ ಸೇರಿಸುವಂತೆ, ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಉತ್ತರಕನ್ನಡ ಜಿಲ್ಲೆ, ಯಲ್ಲಾಪುರದ ತೊಟ್ಟಿಲಗುಂಡಿಯಲ್ಲಿ, ವನವಾಸಿ ಮಕ್ಕಳಿಗಾಗಿ ಗಿರಿ ಮಯೂರಿ ಬೇಸಿಗೆ ಶಿಬಿರ ಯಶಸ್ವಿಯಾಗಿ ಜರುಗಿತು. ವನವಾಸಿ ಸಿದ್ದಿ, ಗೌಳಿ ಹಾಗೂ ಹಾಲಕ್ಕಿ ಸಮುದಾಯದ ಸರ್ಕಾರಿ ಶಾಲಾ ಮಕ್ಕಳ ರಂಗ ತರಬೇತಿ ಶಿಬಿರಕ್ಕೆ, ಕಲಾವಿದೆ ಗಿರಿಜಾ ಸಿದ್ದಿ ಸಂಪನ್ಮೂಲ ವ್ಯಕ್ತಿಯಾಗಿದ್ದರು.

ಮಂಗಳೂರಿನ ಸಹ್ಯಾದ್ರಿ ಸಂಚಯ ಮತ್ತು ಲಿಟಲ್ ರೇ ಫೌಂಡೇಶನ್ ಸಂಘಟಿಸಿದ್ದ ಶಿಬಿರದ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಅವರು ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ರಂಗ ಕಲಾವಿದೆ ಗಿರಿಜಾ ಸಿದ್ದಿ ಧ್ವನಿ 40 ಸೆಕೆಂದುಗಳು

<><><>

ಧಾರವಾಡದ ಖ್ಯಾತ ಸಮಾಜ ವಿಜ್ಞಾನಿ, ಡಾಕ್ಟರ್ ಪ್ರಕಾಶ ಭಟ್ ಅವರ 'ಹಳ್ಳಿಗಳನ್ನು ಕಟ್ಟುವ ಕಷ್ಟ – ಸುಖ' ಕೃತಿಯನ್ನು, ಧಾರವಾಡ ಜಿಲ್ಲೆ ಕಲಘಟಗಿ ತಾಲೂಕು, ಸೂರಶೆಟ್ಟಿಕೊಪ್ಪ ಸರ್ವೋದಯ ಮಹಾಸಂಘದ, ಅವರ ಅನುಗಾಲದ ಒಡನಾಡಿಗಳು ಬಿಡುಗಡೆ ಮಾಡಿದರು. ಬೆಂಗಳೂರಿನ ಬಹುರೂಪಿ, ಧಾರವಾಡದ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಿದ್ದ, ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ, ಕೃತಿಕಾರ ಡಾಕ್ಟರ್ ಪ್ರಕಾಶ ಭಟ್ ಅವರು, ತಮ್ಮ ಅನಿಸಿಕೆ ಹಂಚಿಕೊಂಡಿದ್ದು ಹೀಗೆ..

<><><>

ಡಾ.ಪ್ರಕಾಶ ಭಟ್ ಧ್ವನಿ 40 ಸೆಕೆಂದುಗಳು

<><><>

ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ, 2 ದಿನಗಳ ದೇಸಿ ಅಕ್ಕಿ ಮೇಳ, ಗಮನ ಸೆಳೆಯಿತು. ದೇಸಿ ಭತ್ತ ತಳಿಗಳ ಸಂರಕ್ಷಕ ಶ್ರೀನಿವಾಸ್ ಮಾತನಾಡಿ, ದೇಸಿ ಅಕ್ಕಿ ಮೇಳದ ಮೂಲಕ, ಗ್ರಾಹಕರಿಗೆ ಔಷಧೀಯ ಗುಣವಿರುವ, ಅತ್ಯುತ್ತಮ ಗುಣಮಟ್ಟದ ಅಕ್ಕಿಯನ್ನು ರೈತರೇ ನೇರವಾಗಿ ತಲುಪಿಸಲು, ಬೆಳೆಗಾರರಿಗೆ ವೇದಿಕೆ ಸಿಕ್ಕಿತು. ಮೇಳದಲ್ಲಿ 80ಕ್ಕೂ ಹೆಚ್ಚು ಬಗೆಯ ಅಕ್ಕಿಗಳು, 350ಕ್ಕೂ ಹೆಚ್ಚು ಭತ್ತದ ತಳಿಗಳು, ಬಿತ್ತನೆ ಬೀಜಗಳ ಮಾರಾಟ ಮತ್ತು ಪ್ರದರ್ಶನ, ಜನಾಕರ್ಷಣೆಯ ಕೇಂದ್ರವಾಗಿತ್ತು ಎಂದರು.

<><><>

ಉತ್ತರಕನ್ನಡ ಜಿಲ್ಲೆ, ಗೋಕರ್ಣದ ತದಡಿ ಮೂಡಂಗಿ ಬಳಿ, ಪ್ರವಾಸಿಗರ ದೋಣಿ ಸಮುದ್ರದ ಹಿನ್ನೀರಿನಲ್ಲಿ ಮುಳುಗಿದೆ. 42 ಜನ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕರಾವಳಿ ಕಾವಲು ಪಡೆ ಹಾಗೂ ಸ್ಥಳೀಯ ಬೋಟ್‌ಗಳ ಸಹಾಯದಿಂದ, ಮಗುಚಿದ ಬೋಟ್‌ನಲ್ಲಿದ್ದ ಪ್ರವಾಸಿಗರನ್ನು ರಕ್ಷಿಸಲಾಗಿದೆ ಎಂದು, ಕರಾವಳಿ ಕಾವಲು ಪಡೆಯ ಪಿಎಸ್‌ಐ ಅನೂಪ ನಾಯಕ್ ಮಾಹಿತಿ ನೀಡಿದ್ದಾರೆ. ಸುರಕ್ಷತಾ ಕ್ರಮಗಳನ್ನು ಅನುಸರಿಸದೇ ಟೂರಿಸ್ಟ್ ಬೋಟ್‌ನ್ನು ಓಡಿಸಿದರೂ, ದೊಡ್ಡ ದುರಂತ ತಪ್ಪಿದೆ ಎಂದು, ಗೋಕರ್ಣ ಠಾಣೆಯ ಪೊಲೀಸ್ ಇನ್ಸಪೆಕ್ಟರ್ ಕೆ.ಎಂ. ಯೋಗೇಶ ತಿಳಿಸಿದ್ದಾರೆ.

<><><>

ದಕ್ಷಿಣಕನ್ನಡ ಜಿಲ್ಲೆ ಚೆಸ್ ಅಸೋಸಿಯೇಷನ್ ವತಿಯಿಂದ, ಕುದ್ಮಲ್ ರಂಗರಾವ್ ಪುರಭವನದಲ್ಲಿ ನಡೆದ, ರಾಜ್ಯ ಮಟ್ಟದ 17ರ ವಯೋಮಿತಿಯ, ಫೀಡೆ ರೇಟೆಡ್ ಚೆಸ್ ಪಂದ್ಯಾವಳಿಯ ಮುಕ್ತ ವಿಭಾಗದಲ್ಲಿ, ಬೆಂಗಳೂರಿನ ಸಿದ್ಧಾಂತ ಪೂಂಜ ಹಾಗೂ ಬಾಲಕಿಯರ ವಿಭಾಗದಲ್ಲಿ ಉತ್ತರಕನ್ನಡ ಜಿಲ್ಲೆಯ ಅಕ್ಷಯಾ ಸಾಥಿ ಚಾಂಪಿಯನ್ ಆಗಿದ್ದಾರೆ.

<><><>

ಮಲೇಷ್ಯಾದಲ್ಲಿ ಆಯೋಜಿಸಿದ್ದ, ಅಂತಾರಾಷ್ಟ್ರೀಯ ಕರಾಟೆ ಓಪನ್ ಚಾಂಪಿಯನ್‌ಶಿಪ್‌ನಲ್ಲಿ, ಭಾರತವನ್ನು ಪ್ರತಿನಿಧಿಸಿದ್ದ, ಹುಬ್ಬಳ್ಳಿಯ ಗ್ರಂಥ ದವೇ ಎರಡು ಚಿನ್ನದ ಪದಕ ಜಯಿಸಿದ್ದಾರೆ. 8 ರಿಂದ 10 ವರ್ಷ ವಯೋಮಿತಿಯ ವಿಭಾಗದಲ್ಲಿ, ಕಮಿಟೆ ಮತ್ತು ಕಾಟಾದಲ್ಲಿ ಗ್ರಂಥ ಪ್ರಥಮ ಸ್ಥಾನ ಪಡೆದಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಜೂನ್ 7 ರಿಂದ 14ರ ವರೆಗೆ, ಎಸ್.ಎಸ್.ಎಲ್.ಸಿ. ಎರಡನೇ ಪರೀಕ್ಷೆ ನಡೆಯಲಿದೆ.

<><><>

ಅಂತಾರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನವನ್ನು, ರಾಜ್ಯದ ವಿವಿಧೆಡೆ ಆಚರಿಸಲಾಯಿತು.

<><><>

ವಿಜಯಪುರ ಜಿಲ್ಲೆ, ಆಲಮಟ್ಟಿ ಹಾಗೂ ಯಾದಗಿರಿ ಜಿಲ್ಲೆಯ ನಾರಾಯಣಪುರ ಜಲಾಶಯದಿಂದ, 2 ಟಿ.ಎಂ.ಸಿ. ನೀರನ್ನು, ಕೇವಲ ಕುಡಿಯುವ ಉದ್ದೇಶಕ್ಕಾಗಿ ಹರಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಟಿ. ಭೂ ಬಾಲನ್ ನಿರ್ದೇಶನ ನೀಡಿದ್ದಾರೆ.

<><><>

ಗದಗ ಜಿಲ್ಲೆ, ನಾಗಾವಿಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಹಾಗೂ ಯಳವತ್ತಿ ಗ್ರಾಮ ಪಂಚಾಯ್ತಿ ಆಶ್ರಯದಲ್ಲಿ, ಗ್ರಾಮ ವಾಸ್ತವ್ಯ ಮತ್ತು ಅಧ್ಯಯನ ಶಿಬಿರ ಜರುಗಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಭಾರತದ ಬಗೆಗಿನ ಓದು ಮತ್ತು ಸಂವಿಧಾನದ ಓದು; ಒಂದೇ ನಾಣ್ಯದ ಎರಡು ಮುಖ – ನ್ಯಾಯಮೂರ್ತಿ ನಾಗಮೋಹನ್ ದಾಸ್.
- ದಾವಣಗೆರೆ ಜಿಲ್ಲಾದ್ಯಂತ ಉತ್ತಮ ಮಳೆ; ಚುರುಕುಗೊಂಡ ಕೃಷಿ ಚಟುವಟಿಕೆ.
- ಮುಂಗಾರು ಮಳೆ; ಕೊಡಗಿನಲ್ಲಿ ಸಂಭವನೀಯ ಪ್ರವಾಹ ಎದುರಿಸಲು, ಪೂರ್ವ ಸಿದ್ಧತೆ.
- ಚಿಕ್ಕಮಗಳೂರು, ಶಿವಮೊಗ್ಗ ಸೇರಿದಂತೆ, ಕರಾವಳಿ ಜಿಲ್ಲೆಗಳಲ್ಲಿ, ಮುಂದಿನ ನಾಲ್ಕೈದು ದಿನ, ಭಾರೀ ಮಳೆ ಸಾಧ್ಯತೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>